ಸೃಜನಿ

SRUJANI: Indian Journal of Innovative Research and Development (SIJIRD)
Volume-4 Issue 3, July-August 2025, Pp. 32-41
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

ಕೃಷಿ ಅಭಿವೃದ್ಧಿಯಲ್ಲಿ ತುಂಗಭದ್ರಾ ಜಲಾಶಯದ ಪಾತ್ರ

ಮಂಜಣ್ಣ ಟಿ
ಸಂಶೋಧನಾ ವಿದ್ಯಾರ್ಥಿ, ಅಭಿವೃದ್ಧಿ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

Abstract:
ಭಾರತವು ಹಲವಾರು ನದಿ, ಕಣಿವೆ ಯೋಜನೆಗಳನ್ನು ರೂಪಿಸಿ, ಕಾರ್ಯಗತಗೊಳಿಸಿದೆ. ನದಿ ಕಣಿವೆಯಲ್ಲಿ ಅದರ ಉಪನದಿಗಳನ್ನು ಒಳಗೊಂಡಂತೆ ಹಲವಾರು ಅಣೆಕಟ್ಟುಗಳನ್ನು ನಿರ್ಮಿಸಲಾಗಿದೆ. ಇದರಿಂದ ಆ ನದಿ ಕಣಿವೆಯಲ್ಲಿನ ಜಲ ಸಂಪತ್ತಿನ ಗರಿಷ್ಠ ಪ್ರಮಾಣದ ಬಳಕೆಯು ಸಾಧ್ಯವಾಗುವುದು. ಇಂತಹ ಯೋಜನೆಗಳು ವ್ಯವಸಾಯಕ್ಕೆ ನೀರನ್ನು ಒದಗಿಸುವುದಲ್ಲದೆ ಇನ್ನಿತರ ಹಲವಾರು ಉದ್ದೇಶಗಳನ್ನು ಹೊಂದಿರುತ್ತವೆ. ಅಣೆಕಟ್ಟುಗಳನ್ನು ನಿರ್ಮಾಣ ಮಾಡುವ ಮುಖ್ಯ ಉದ್ದೇಶಗಳೆಂದರೆ ಕೃಷಿಗೆ ಬೇಕಾದಂತ ನೀರಾವರಿ ಸೌಲಭ್ಯವನ್ನು ಒದಗಿಸುವುದು, ಜಲವಿದ್ಯುಚ್ಛಕ್ತಿಯನ್ನು ಉತ್ಪಾದಿಸುವುದು, ನದಿಗಳ ಪ್ರವಾಹವನ್ನು ನಿಯಂತ್ರಿಸುವುದು, ಮೀನುಗಾರಿಕೆಯ ಅಭಿವೃದ್ಧಿ ಮಾಡುವುದು ಅರಣ್ಯ ಸಂಪತ್ತನ್ನು ವೃದ್ಧಿಸುವುದಾಗಿದೆ. ಈ ಲೇಖನದಲ್ಲಿ ಕೃಷಿ ಅಭಿವೃದ್ಧಿಯಲ್ಲಿ ತುಂಗಭದ್ರಾ ಜಲಾಶಯದ ಪಾತ್ರವನ್ನು ಕುರಿತು ಚರ್ಚಿಸಲಾಗಿದೆ.

Keywords: *ಕೃಷಿ, ನೀರಾವರಿ, ಜಲಾಶಯ, ತುಂಗಭದ್ರ ನದಿ.*

ಪೀಠಿಕೆ

ಭಾರತದ ಮೊದಲ ಪ್ರಧಾನಿ ಜವಾಹರಲಾಲ್ ನೆಹರೂ ಅವರು 'ಅಣೆಕಟ್ಟುಗಳು ಆಧುನಿಕ ಭಾರತದ ನವ ದೇಗುಲಗಳು' ಎಂದು ಬಣ್ಣಿಸಿದರು. ಕ್ರಿ.ಶ.1945ರ ಫೆಬ್ರವರಿ 28 ರಂದು ತುಂಗಭದ್ರಾ ಅಣೆಕಟ್ಟು ನಿರ್ಮಾಣಕ್ಕೆ ಶಂಕುಸ್ಥಾಪನೆ ಮಾಡಲಾಯಿತು. ಮದ್ರಾಸ್ ಸರ್ಕಾರದ ಗವರ್ನರ್ ಸರ್ ಅರ್ಥರ್ ಹೋಪ್ ಅವರು ಅಣೆಕಟ್ಟು ನಿರ್ಮಾಣದ ಬಲಭಾಗದಲ್ಲಿ ಅಡಿಗಲ್ಲು ಹಾಕಿ ಶಂಕುಸ್ಥಾಪನೆ ನೆರವೇರಿಸಿದರು. ಹೈದರಾಬಾದ್ ಸರ್ಕಾರದ ರಾಜಕುಮಾರ ನವಾಜ್ಅಜಾಮ್ ಅವರು ಅಣೆಕಟ್ಟು ನಿರ್ಮಾಣದ ಎಡಭಾಗದಲ್ಲಿ ಅಡಿಗಲ್ಲು ಹಾಕಿ ಶಂಕುಸ್ಥಾಪನೆ ನೆರವೇರಿಸಿದರು. ತುಂಗಭದ್ರಾ ಜಲಾನಯನ ಪ್ರದೇಶವು 28179 ಚ.ಕಿ.ಮೀ ವ್ಯಾಪ್ತಿಯನ್ನು ಹೊಂದಿದ್ದು, ಅಣೆಕಟ್ಟೆಯ ಹಿನ್ನೀರಿನ ಪ್ರದೇಶವು 80 ಕಿ.ಮೀಟರ್‌ಗಳಷ್ಟಿದೆ. ತುಂಗಭದ್ರಾ ಯೋಜನೆಯು ನೀರಾವರಿ, ಜಲವಿದ್ಯುಚ್ಛಕ್ತಿ ಉತ್ಪಾದನೆ ಈ ಯೋಜನೆಯ ಮುಖ್ಯ ಉದೇಶವಾಗಿದ್ದು, ಕರ್ನಾಟಕ ಮತ್ತು ಆಂಧ್ರಪ್ರದೇಶ ರಾಜ್ಯಗಳ ಸಂಯುಕ್ತ ಯೋಜನೆಯಾಗಿದೆ. ಈ ಯೋಜನೆ ಕರ್ನಾಟಕದಲ್ಲಿ ಅತಿದೊಡ್ಡ ನೀರಾವರಿ ಯೋಜನೆಯಾಗಿದೆ. ಈ ಜಲಾಶಯವನ್ನು ಅವಿಭಜಿತ ಬಳ್ಳಾರಿ ಜಿಲ್ಲೆಯ ಹೊಸಪೇಟೆಯಿಂದ 4.8 ಕಿ.ಮೀ ದೂರದಲ್ಲಿರುವ ಮಲ್ಲಾಪುರ ಎಂಬಲ್ಲಿ ತುಂಗಭದ್ರಾ ನದಿಗೆ ನಿರ್ಮಿಸಲಾಗಿದೆ. ಈ ಜಲಾಶಯವನ್ನು 'ಪಂಪ ಸಾಗರ' ಎಂದು ಕರೆಯುವರು. ಇಂದು ಆಂಧ್ರಪ್ರದೇಶ ಮತ್ತು ಕರ್ನಾಟಕದ 5.5 ಲಕ್ಷ ಹೆಕ್ಟೇರ್

Please cite this article as: ಮಂಜಣ್ಣ, ಟಿ. (2025). ಕೃಷಿ ಅಭಿವೃದ್ಧಿಯಲ್ಲಿ ತುಂಗಭದ್ರಾ ಜಲಾಶಯದ ಪಾತ್ರ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್,* 4(3), 32–41

ಭೂಮಿಗೆ ನೀರಾವರಿ ಹಾಗೂ 126 ಮೆ.ವ್ಯಾಟ್‌ಗಳ ವಿದ್ಯುಚ್ಛಕ್ತಿ ಒದಗಿಸಿದೆ.

ಅವಿಭಜಿತ ಬಳ್ಳಾರಿ ಜಿಲ್ಲೆಯು ಒಂದು ಕಾಲಕ್ಕೆ ಕ್ಷಾಮದಿಂದ ನಲುಗಿ ಹೋಗಿದ್ದ ಪ್ರದೇಶವಾಗಿದ್ದು, ಇಂದು ತುಂಗಭದ್ರಾ ಅಣೆಕಟ್ಟಿನಿಂದಾಗಿ ಸಮೃದ್ಧಿಯ ಬೀಡಾಗಿದೆ. ಸಾವಿರಾರು ಕೋಟಿ ರೂಪಾಯಿಗಳ ವ್ಯವಹಾರ ಈ ಅಣೆಕಟ್ಟಿನಿಂದಾಗಿ ನಡೆಯುತ್ತಿದೆ. ಸುಮಾರು ಒಂದೂವರೆ ಶತಮಾನದ ಹಿಂದೆ ಅಂದರೆ 1876–78ರ ಕಾಲಘಟ್ಟದಲ್ಲಿ ಬಳ್ಳಾರಿ, ರಾಯಚೂರು, ಕರ್ನೂಲು ಸೇರಿದಂತೆ ದಕ್ಷಿಣ ಭಾರತವನ್ನೇ ನಲುಗಿಸಿದ್ದ ಭೀಕರ ಬರಕ್ಕೆ 50 ಲಕ್ಷಕ್ಕೂ ಹೆಚ್ಚು ಜನ ಬಲಿಯಾದರು. ಈ ಪ್ರದೇಶಗಳು ಅಲ್ಲಿಯವರೆಗೆ ರಾಗಿ, ಜೋಳ, ಸಜ್ಜೆ ಬೆಳೆಯುತ್ತಿದ್ದ ರೈತರಿಗೆ ಹತ್ತಿ, ಅಫೀಮು, ನೀಲಿಗಿಡ ಬೆಳೆದು ಹೆಚ್ಚು ಹಣ ಗಳಿಸುವಂತೆ ಬ್ರಿಟಿಷ್ ಸರ್ಕಾರ ಪ್ರೋತ್ಸಾಹಿಸತೊಡಗಿತ್ತು. ಇಲ್ಲಿ ಬೆಳೆದ ಹತ್ತಿಯನ್ನು ಇಂಗ್ಲೆಂಡಿನ ಬಟ್ಟೆ ಗಿರಣಿಗಳಿಗೆ, ಕಾಳು ಕಡಿಗಳನ್ನು ಇಂಗ್ಲೆಂಡಿನ ಮಾರುಕಟ್ಟೆಗೆ ರಫ್ತು ಮಾಡತೊಡಗಿದರು. ಹೀಗಾಗಿ ಪರಂಪರಾಗತವಾಗಿ ಬೆಳೆಯುತ್ತಿದ್ದ ಆಹಾರ ಧಾನ್ಯಗಳ ಬದಲಾಗಿ ಎಲ್ಲೆಡೆ ಅಫೀಮು, ಎಣ್ಣೆಕಾಳು, ಹತ್ತಿಯನ್ನು ವ್ಯಾಪಕವಾಗಿ ಬೆಳೆಯಲಾರಂಭಿಸಿದರು. ಆಹಾರ ಧಾನ್ಯಗಳು ಬೆಳೆಯುವುದು ಮನೆಯ ಬಳಕೆಗೆ ಎಂಬ ಪರಿಕಲ್ಪನೆಯಿತ್ತು. ಬದಲಾಗಿ, ಕಾಳನ್ನು ಮಾರಿ ಹಣಗಳಿಸಬಹುದು ಎಂಬ ಭಾವನೆ ಇರಲಿಲ್ಲ. ಆದರೆ ಬ್ರಿಟಿಷರು ಆಹಾರ ಧಾನ್ಯಗಳನ್ನು ಮಾರುಕಟ್ಟೆಯ ಸರಕನ್ನಾಗಿ ಮಾಡಿದ ನಂತರ ಜನ ಹಣಕ್ಕಾಗಿ ತಮ್ಮ ಆಹಾರ ಧಾನ್ಯಗಳನ್ನು ಮಾರಾಟಮಾಡಿ ಖಾಲಿ ಮಾಡಿಕೊಂಡರು.

1876ರಲ್ಲಿ ಮಳೆ ಅಭಾವದಿಂದ ಬೆಳೆ ನಾಶವಾದ ಕಾರಣ ಭೀಕರ ಬರ ಎದುರಾಯಿತು. ಈ ಭೀಕರ ಬರದ ಸಂದರ್ಭದಲ್ಲೇ ಭಾರತದಿಂದ 3.20ಲಕ್ಷ ಟನ್ ಗೋಧಿಯನ್ನು ಇಂಗ್ಲೆಂಡಿಗೆ ಕಳುಹಿಸಲಾಗಿತ್ತು. ಆದ್ದರಿಂದ ಮನೆಯಲ್ಲಿ ಆಹಾರ ಧಾನ್ಯಗಳ ಕೊರತೆಯುಂಟಾಗಿ, ಅಂಗಡಿಗಳಲ್ಲೂ ಲಭ್ಯ ಇರಲಿಲ್ಲ. ಜನರ ಜೊತೆ ಜಾನುವಾರುಗಳೂ ಅನ್ನ ನೀರಿಲ್ಲದೇ ಮೂಳೆ ಚಕ್ಕಳಗಳಾಗಿ, ಜೀವಂತ ಅಸ್ಥಿಪಂಜರದಂತಾಗಿ ಪ್ರಾಣ ಬಿಟ್ಟವು. ಮಲೇರಿಯಾ, ಕಾಲರಾ, ಪ್ಲೇಗು ಮಾರಿ ರೋಗಗಳ ಕಾಟದಿಂದಾಗಿ ಸತ್ತ ಜನರಿಂದ ಊರು ಕೇರಿಗಳು ತುಂಬಿದ್ದವು. ಸತ್ತವರ ಸಂಸ್ಕಾರಕ್ಕೂ ಜನರಿಲ್ಲದೇ, ನಾಯಿ ನರಿ, ರಣಹದ್ದು, ಕಾಗೆಗಳಿಗೆ ಆಹಾರವಾಗಿ ಹೋದರು. ಇಡೀ ದಕ್ಷಿಣ ಭಾರತದಲ್ಲಿ ಸುಮಾರು ಒಂದು ಕೋಟಿಯಷ್ಟು ಜನಸಂಖ್ಯೆ ಬರದಿಂದ ಜೀವತೆತ್ತರು. ಬ್ರಿಟಿಷರು ಬರ ಪರಿಹಾರಕ್ಕಾಗಿ ಸಶಕ್ತರಿಗೆ ಕೂಲಿಗಾಗಿ ಕಾಳು ಮತ್ತು ದುರ್ಬಲರಿಗೆ, ವಯಸ್ಸಾದ ಮುದುಕರಿಗೆ ಹಾಗೂ ಮಕ್ಕಳಿಗೆ ಅಗತ್ಯ ಸೌಲಭ್ಯಗಳನ್ನು ಒದಗಿಸಿದರು.

ಬಳ್ಳಾರಿ, ರಾಯಚೂರು, ಕರ್ನೂಲು, ಅನಂತಪುರ ಪ್ರಾಂತ್ಯದ ಜನರ ಬರವನ್ನು ಕಾಯಂ ಆಗಿ ಅಳಿಸಿ ಹಾಕಬೇಕೆಂದರೆ ತುಂಗಭದ್ರಾ ನದಿಗೆ ಅಡ್ಡಲಾಗಿ ಒಂದು ಅಣೆಕಟ್ಟನ್ನು ಈಗಿನ ಹೊಸಪೇಟೆಯ ಪಕ್ಕದಲ್ಲಿ ನಿರ್ಮಿಸಬೇಕೆಂದು ಬ್ರಿಟಿಷ್ ನೀರಾವರಿ ತಜ್ಞ ಆರ್ಥರ್ ಕಾಟನ್ ವರದಿ ನೀಡಿದರು. ಬರ ಪರಿಹಾರಕ್ಕಾಗಿ ಸರ್ಕಾರ ಖರ್ಚು ಮಾಡುವ ಹಣದ ಸ್ವಲ್ಪ ಮೊತ್ತದಲ್ಲೇ ಈ ಅಣೆಕಟ್ಟು ಹಾಗೂ ಕಾಲುವೆಗಳನ್ನು ನಿರ್ಮಿಸಿ ಈ ಭಾಗದ ಶಾಶ್ವತ ಬರವನ್ನು ನೀಗಿಸಬಹುದು ಎಂದು ಸಲಹೆ ನೀಡಿದರು.

ಆ ವೇಳೆಗಾಗಲೇ ಜನಾನುರಾಗಿಯಾಗಿದ್ದ ಆರ್ಥರ್ ಕಾಟನ್ ತಮಿಳುನಾಡು, ಆಂಧ್ರಪ್ರದೇಶ ಸೇರಿದಂತೆ ದೇಶದೆಲ್ಲೆಡೆ ಅನೇಕ ಅಣೆಕಟ್ಟುಗಳನ್ನು ನಿರ್ಮಿಸಿ ನೀರಾವರಿ ಒದಗಿಸಿ ಜನರ ಕಣ್ಮಣಿಯಾಗಿದ್ದ. ಆದರೆ ಬ್ರಿಟಿಷ್ ಸರ್ಕಾರ, ಹಣಕಾಸಿನ ಕೊರತೆ ನೆಪದಲ್ಲಿ ಈ ಯೋಜನೆಯನ್ನು ಮುಂದಕ್ಕೆ ಹಾಕಿತು. 1902ರಲ್ಲಿ ಮದ್ರಾಸ್ ಸರ್ಕಾರದ ಮುಖ್ಯ ಎಂಜಿನಿಯರ್ ಆಗಿದ್ದ ಸರ್ ಕರ್ನಲ್ ಸ್ಮಾರ್ಟ್ ತುಂಗಭದ್ರಾ ಅಣೆಕಟ್ಟಿನ ನಿರ್ಮಾಣಕ್ಕಾಗಿ

ವಿವರವಾದ ವರದಿಯನ್ನು ಸಿದ್ಧಪಡಿಸಿ ನೀರಾವರಿ ಆಯೋಗಕ್ಕೆ ಸಲ್ಲಿಸಿದರು.

1903ರಲ್ಲಿ ಮುಖ್ಯ ಎಂಜಿನಿಯರ್ ಇನ್ಸ್‌ಪೆಕ್ಟರ್ ಜನರಲ್ ಆಫ್ ಇರಿಗೇಶನ್ ಮಕೆಂಜೀ ಎಂಬುವರು ಬಂದ ನಂತರ 1906ರಲ್ಲಿ ಹೊಸಪೇಟೆ ಪಕ್ಕದಲ್ಲಿದ್ದ ಮಲ್ಲಾಪುರದಲ್ಲಿ ಎರಡು ಗುಡ್ಡಗಳ ನಡುವೆ ಅಣೆಕಟ್ಟನ್ನು ನಿರ್ಮಿಸಿ ಅಲ್ಲಿಂದ ಈ ಬಳ್ಳಾರಿ, ಕರ್ನೂಲ್, ಅನಂತಪುರ, ಕಡಪ ಮತ್ತು ನೆಲ್ಲೂರು ಜಿಲ್ಲೆಗಳಿಗೆ 8,50,000 ಎಕರೆಗಳ ನೀರಾವರಿ ಬೆಳೆಗಳಿಗೆ ಮತ್ತು 1,50,000 ಎಕರೆಗಳ ತೋಟಗಾರಿಕೆಯ ಬೆಳೆಗಳಿಗೆ ಹಾಗೂ 1,50,000 ಎಕರೆಗಳ ಹಿಂಗಾರು ಬೆಳೆಗಳಿಗೆ ನೀರು ವಿವಿಧ ಕಾಲುವೆಗಳ ಮೂಲಕ ನೀರು ಒದಗಿಸಬೇಕು ಎಂದು ವರದಿ ನೀಡಿದರು. ಆದರೆ, ಹೈದರಾಬಾದ್ ನಿಜಾಮ ಸರ್ಕಾರದ ಅಧಿಕಾರಿಗಳು ನದಿಯ ಮೇಲೆ ತಮಗೂ ಹಕ್ಕಿದೆ ಎಂದು ತಮ್ಮ ಪ್ರದೇಶದಲ್ಲಿಯೇ ಅಣೆಕಟ್ಟನ್ನು ನಿರ್ಮಿಸಲು ಹಕ್ಕೊತ್ತಾಯ ಮಾಡಿದರು. ಅತ್ತ ಮುಂಬೈ ಪ್ರಾಂತ್ಯ, ಇತ್ತ ಮೈಸೂರು ರಾಜರ ಸರ್ಕಾರ, ಮೇಲೆ ಹೈದರಾಬಾದ್ ನಿಜಾಮ, ಇನ್ನೊಂದೆಡೆ ಮದ್ರಾಸ್ ಪ್ರಾಂತೀಯ ಸರ್ಕಾರ ಹೀಗೆ ನಾಲ್ಕೂ ಸರ್ಕಾರಗಳು ತಮ್ಮ ತಮ್ಮ ಹಿತಾಸಕ್ತಿಗೆ ಅನುಗುಣವಾಗಿ ಅಣೆಕಟ್ಟು ನಿರ್ಮಿಸುವ ಪ್ರಸ್ತಾವನೆ ಸಲ್ಲಿಸಿದವು. ಅಣೆಕಟ್ಟಿನ ನಿರ್ಮಾಣ ನೆನೆಗುದಿಗೆ ಬಿತ್ತು. 1940ರಲ್ಲಿ ಮದ್ರಾಸ್ ಸರ್ಕಾರ ಮತ್ತೆ ಯೋಜನೆ ಕೈಗೆತ್ತಿಕೊಂಡಿತು. ಆಗಿನ ಮುಖ್ಯ ಎಂಜಿನಿಯರ್ ತಿರುಮಲೆ ಅಯ್ಯಂಗಾರ್ ನೇತೃತ್ವದಲ್ಲಿ ಒಂದು ವಸ್ತುನಿಷ್ಠ ಕಾರ್ಯಯೋಜನಾ ವರದಿ ತಯಾರಿಸಲು ನೇಮಿಸಲಾಯಿತು.

ನಿಜಾಮರ ಸರ್ಕಾರ ಸಿ.ಸಿ.ದಲಾಲ್ ಎಂಬ ಎಂಜಿನಿಯರ್‌ರನ್ನು ನೇಮಿಸಿ ಪ್ರತ್ಯೇಕ ವರದಿ ಸಿದ್ಧಪಡಿಸಿ ಸಲ್ಲಿಸಿತು. ಆದರೆ ಎರಡೂ ವರದಿಗಳನ್ನು ಅಳೆದು ತೂಗಿ ನೋಡಿದ ಬ್ರಿಟಿಷ್ ಸರ್ಕಾರ, 1942ರಲ್ಲಿ ತಿರುಮಲೆ ಅಯ್ಯಂಗಾರ್ ನೀಡಿದ ವರದಿಯೇ ಅತ್ಯಂತ ಪ್ರಶಸ್ತವಾದುದು ಎಂದಿತು. ಇಲ್ಲವಾದಲ್ಲಿ ಈ ಅಣೆಕಟ್ಟು ಕರ್ನೂಲು ಅಥವಾ ಇನ್ನೆಲ್ಲೋ ನಿರ್ಮಾಣವಾಗುತ್ತಿತ್ತೇನೋ. ಹೀಗೆ ಈಗಿನ ಹೊಸಪೇಟೆ ಹತ್ತಿರ ಇರುವ ಮಲ್ಲಾಪುರದ ಬಳಿ 133 ಟಿಎಂಸಿ ನೀರು ಸಂಗ್ರಹ ಸಾಮರ್ಥ್ಯದ ಅಣೆಕಟ್ಟು ನಿರ್ಮಾಣ ಆರಂಭವಾಯಿತು.

28ನೇ ಫೆಬ್ರುವರಿ 1945ರಂದು ಇಂದಿನ ಮುನಿರಾಬಾದ್ ಬಳಿ ಹೈದರಾಬಾದ್ ನಿಜಾಮ, ಇತ್ತ ಹೊಸಪೇಟೆಯ ಕಡೆ ಮದ್ರಾಸ್ ಪ್ರಾಂತೀಯ ಸರ್ಕಾರದ ಗವರ್ನರ್ ಆಗಿದ್ದ ಸರ್ ಆರ್ಥರ್ ಹೋಪ್ ಅಡಿಗಲ್ಲನ್ನು ಹಾಕಿ ಯೋಜನೆಯನ್ನು ಉದ್ಘಾಟಿಸಿದರು. ತಿರುಮಲೆ ಅಯ್ಯಂಗಾರ್ ನೇತೃತ್ವದಲ್ಲಿ ನಿರ್ಮಾಣ ಕಾರ್ಯ ಭರದಿಂದ ಆರಂಭವಾಯಿತು. ಆದರೆ ನಿರ್ಮಾಣ ವಸ್ತುಗಳ ಬಳಕೆಯ ವಿವಾದ, ನಿಜಾಮರ ಆಳ್ವಿಕೆಯ ಅಂತ್ಯ, ದೇಶಕ್ಕೆ ದೊರೆತ ಸ್ವಾತಂತ್ರ್ಯ, ಬದಲಾದ ಆಡಳಿತ ಮುಂತಾದ ಕಾರಣಗಳಿಂದ ಯೋಜನೆ ಕುಂಟುತ್ತಾ ಸಾಗಿತು. ಸರ್.ಎಂ.ವಿಶ್ವೇಶ್ವರಯ್ಯ ನೇತೃತ್ವದ ಎಂಜಿನಿಯರ್‌ಗಳ ಮಂಡಳಿಯ ಮೇಲ್ವಿಚಾರಣೆಯಲ್ಲಿ ಪುನಃ ನಿರ್ಮಾಣ ಕಾರ್ಯ ಭರದಿಂದ ಸಾಗಿತು. ಬಳ್ಳಾರಿ ಜಿಲ್ಲೆಯ 41 ಹಳ್ಳಿಗಳು, ರಾಯಚೂರು ಜಿಲ್ಲೆಯ 40 ಹಳ್ಳಿಗಳು ಮತ್ತು ಧಾರವಾಡ ಜಿಲ್ಲೆಯ 9 ಹಳ್ಳಿಗಳು ಸೇರಿದಂತೆ ಒಟ್ಟು 90 ಗ್ರಾಮಗಳು ತುಂಗಭದ್ರಾ ಅಣೆಕಟ್ಟೆಯ ಹಿನ್ನೀರಿನ ಪ್ರದೇಶಗಳು ಮುಳುಗಡೆಯಾಗಿ ಸುಮಾರು 55 ಸಾವಿರ ಜನರನ್ನು ಸ್ಥಳಾಂತರಿಸಲಾಯಿತು. 1953ರಲ್ಲಿ ಅಧಿಕೃತವಾಗಿ ಮೊದಲ ಬಾರಿಗೆ ಕಾಲುವೆಯಲ್ಲಿ ನೀರು ಹರಿಯಿತು. ನೂರಾರು ಕಿಲೋ ಮೀಟರ್ ಉದ್ದದ ಮೂರು ಕಾಲುವೆಗಳ ನಿರ್ಮಾಣವೂ ಮುಂದುವರೆದು 1960ರ ವೇಳೆಗೆ ಸಂಪೂರ್ಣಗೊಂಡಿತು. ಈಗಿನ ಹಾಗೆ ಅತ್ಯಾಧುನಿಕ ಯಂತ್ರಗಳು ಇಲ್ಲದೇ 340 ಕಿ.ಮೀ ಉದ್ದದ ಕಾಲುವೆಗಳ ನಿರ್ಮಾಣಕ್ಕೆ ಮಾನವ ಶಕ್ತಿ ಬಳಕೆಯಾಯಿತು. ಕಲ್ಲು ಗುಡ್ಡಗಳಲ್ಲಿ ಕಿಲೋಮೀಟರ್‌ಗಟ್ಟಲೇ ಸುರಂಗವನ್ನು ಕೊರೆದು ಕಾಲುವೆ ನಿರ್ಮಿಸಿದ್ದು ನೋಡಿದರೆ

ವಿಸ್ಮಯವಾಗುತ್ತದೆ. ಇಂತಹ ಸವಾಲುಗಳನ್ನು ಎದುರಿಸಿ ಅಣೆಕಟ್ಟನ್ನು ನಿರ್ಮಿಸಿದ ತಿರುಮಲೆ ಅಯ್ಯಂಗಾರ್ ಆಧುನಿಕ ಭಗೀರಥನೇ ಸರಿ. ಇವರ ಶ್ರಮದಿಂದಾಗಿ ಬರಡು ಬೆಂಗಾಡಾಗಿದ್ದ ಬಳ್ಳಾರಿ, ರಾಯಚೂರು, ಅನಂತಪುರ, ಕರ್ನೂಲು, ಮೆಹಬೂಬ್‌ನಗರದ ಸುಮಾರು 16 ಲಕ್ಷ ಎಕರೆ ಜಮೀನಿನಲ್ಲಿ ಭತ್ತ, ಕಬ್ಬು, ಬಾಳೆ ಬೆಳೆಯಲಾಗುತ್ತಿದೆ. ಗಂಗಾವತಿ–ಸಿಂಧನೂರಿನ ಪ್ರದೇಶವನ್ನು ಭತ್ತದ ಕಣಜವೆಂದೇ ಗುರುತಿಸಲಾಗುತ್ತಿದೆ.

ಕರ್ನಾಟಕ, ತೆಲಂಗಾಣ ಹಾಗೂ ಆಂಧ್ರಪ್ರದೇಶದ ಐದು ಜಿಲ್ಲೆಗಳ ಒಂದು ಕೋಟಿಗೂ ಅಧಿಕ ಜನರು ತುಂಗಭದ್ರಾ ಅಣೆಕಟ್ಟಿನ ನೀರನ್ನು ಬಳಸುತ್ತಿದ್ದಾರೆ. ಅನೇಕ ಸಕ್ಕರೆ ಕಾರ್ಖಾನೆಗಳು, ಅಕ್ಕಿಯ ಗಿರಣಿಗಳು, ವಿವಿಧ ಕೈಗಾರಿಕೋದ್ಯಮಗಳು ಈ ಜಿಲ್ಲೆಗಳಲ್ಲಿ ನೆಲೆಯೂರಿವೆ. ಮೀನುಗಾರಿಕೆ ಒಂದು ದೊಡ್ಡ ಉದ್ಯಮವಾಗಿದೆ. ಇಡೀ ಈ ಭಾಗದ ಸಾಮಾಜಿಕ–ಆರ್ಥಿಕ ಅಭಿವೃದ್ಧಿ ಸುಧಾರಿಸಿದೆ.

ಜೀವ ವೈವಿಧ್ಯದ ಆಗರ

ಅಣೆಕಟ್ಟು ನಿರ್ಮಾಣವಾಗುವುದಕ್ಕಿಂತ ಮುಂಚೆ ಬಳ್ಳಾರಿ, ರಾಯಚೂರು ಪ್ರದೇಶ ಒಂದು ಮಳೆಯಾಧಾರಿತ ಹುಲ್ಲುಗಾವಲಾಗಿತ್ತು. ಇದು ಕೃಷ್ಣಮೃಗ, ಸಾರಂಗ ಎಂಬ ಜಿಂಕೆಗಳ ಬೀಡಾಗಿತ್ತು. ಇವುಗಳನ್ನು ಬೇಟೆಯಾಡಲು ಸಂಡೂರು ಕಾಡಿನಿಂದ ಹುಲಿಗಳು, ಚಿರತೆಗಳು ಬರುತ್ತಿದ್ದವು. ಆದರೆ ಯಾವಾಗ ಶುಷ್ಕ ಹುಲ್ಲುಗಾವಲುಗಳೆಲ್ಲಾ ನೀರು ತುಂಬಿಕೊಂಡು ಭತ್ತದ ಗದ್ದೆಗಳಾದವೋ, ಆಗ ಜಿಂಕೆಗಳು ಹಾಗೂ ಚಿರತೆಗಳು ಕಣ್ಮರೆಯಾದವು.

ಆದರೆ 378 ಚದರ ಕಿಲೋಮೀಟರ್ ಪ್ರದೇಶದಲ್ಲಿ ಸಂಗ್ರಹಗೊಂಡ ಅಪಾರ ಜಲರಾಶಿ ದೇಶ ವಿದೇಶಗಳ ಹಕ್ಕಿಗಳನ್ನು ಸೆಳೆಯಿತು. ಚಳಿಗಾಲದಲ್ಲಿ ಉತ್ತರ ಭೂಗೋಳದಿಂದ ವಲಸೆ ಬರುವ ನೂರಾರು ಪ್ರಭೇದದ ಹಕ್ಕಿಗಳಿಗೆ ಈ ಅಣೆಕಟ್ಟು ಸುರಕ್ಷಿತ ಆಶ್ರಯ ನೀಡಿದೆ. ಪ್ರಮುಖವಾಗಿ ಬಣ್ಣದ ಕೊಕ್ಕರೆ (ಪೇಂಟೆಡ್ ಸ್ಟಾರ್ಕ್), ಬೂದು ಬಕ (ಗ್ರೇ ಹೆರಾನ್), ಇರುಳು ಬಕ (ನೈಟ್‌ಹೆರಾನ್), ನೀರುಕಾಗೆ (ಕಾರ್ಮೋರೆಂಟ್), ಗೋವಕ್ಕಿ (ಕ್ಯಾಟಲ್ ಈಗ್ರೇಟ್), ಹೆಜ್ಜಾರ್ಲೆ (ಪೆಲಿಕಾನ್ಸ್), ಕಬ್ಬಕ್ಕಿಗಳು, ಕೊಕ್ಕರೆ, ವಿವಿಧ ಜಾತಿಯ ಬಾತುಕೋಳಿಗಳು, ವಿವಿಧ ಜಾತಿಯ ಬಾತುಕೋಳಿಗಳು ಸೇರಿದಂತೆ ನೂರಾರು ಪ್ರಭೇದಗಳ ಹಕ್ಕಿಗಳಿಗೆ ಕೆಸರು ದಂಡೆಯಲ್ಲಿ ಕಪ್ಪೆಚಿಪ್ಪು, ಹುಳು ಹುಪ್ಪಟೆ, ಏಡಿ, ಮೀನು ಮುಂತಾದ ಸಮೃದ್ಧವಾದ ಆಹಾರ ದೊರಕುತ್ತಿವೆ. ಹೀಗಾಗಿ ಈ ಜಲಾಶಯದ ಹಿನ್ನೀರಿನ ಪ್ರದೇಶವನ್ನು ಒಂದು 'ಪ್ರಮುಖ ಹಕ್ಕಿಗಳ ನೆಲೆ' ಮತ್ತು ಅಂಕಸಮುದ್ರವು ಸಂರಕ್ಷಿತ ಪಕ್ಷಿಧಾಮವಾಗಿ ಘೋಷಣೆ ಆಗಿರುವುದರಿಂದ ಅಂತರರಾಷ್ಟ್ರೀಯ ಪಕ್ಷಿಗಳ ಸಂರಕ್ಷಣಾ ಸಂಸ್ಥೆಗಳು ಗುರುತಿಸಿ ಮಾನ್ಯತೆ ನೀಡಿವೆ.

ಜನಪ್ರಿಯ ಪ್ರವಾಸಿ ತಾಣ

ತುಂಗಭದ್ರಾ ಅಣೆಕಟ್ಟು, ಕಾಲುವೆಗಳು ಹಾಗೂ ನೀರಿನ ಸರಬರಾಜು ಉಸ್ತುವಾರಿಯ ಸಲುವಾಗಿ ಕರ್ನಾಟಕ ಹಾಗೂ ಆಂಧ್ರ ಪ್ರದೇಶ ಸರ್ಕಾರಗಳ ಜಂಟಿ ಸಮಿತಿ ರಚಿಸಲಾಗಿದೆ. ಅಣೆಕಟ್ಟಿನ ಬಲದಂಡೆಯಲ್ಲಿ ವೈಕುಂಠ ಪ್ರವಾಸಿ ಮಂದಿರ, ಎಡದಂಡೆಯಲ್ಲಿ ಕೈಲಾಸ ಪ್ರವಾಸಿ ಮಂದಿರಗಳು ಅತ್ಯಂತ ರಮಣೀಯವಾಗಿವೆ. ಅಣೆಕಟ್ಟಿನ ಕೆಳಗೆ ಸುಂದರ ಉದ್ಯಾನ, ಸಂಗೀತ ಕಾರಂಜಿ, ಜಿಂಕೆವನ, ದೋಣಿವಿಹಾರ, ಜಪಾನ್ ಮಾದರಿಯ ಉದ್ಯಾನ, ಚಕ್ರವನ, ನಂದನವನ, ಮುನಿರಾಬಾದ್‌ನಲ್ಲಿ ಪಂಪಾವನ ಹೀಗೆ ಅನೇಕ ಉದ್ಯಾನವನಗಳು ರಜಾದಿನಗಳಲ್ಲಿ ಅಪಾರ ಸಂಖ್ಯೆಯ ಪ್ರವಾಸಿಗರನ್ನು ಆಕರ್ಷಿಸುತ್ತಿವೆ.

ತುಂಗಭದ್ರಾ ಯೋಜನೆ ಕರ್ನಾಟಕದಲ್ಲಿ ಅತಿದೊಡ್ಡ ನೀರಾವರಿ ಯೋಜನೆಯಾಗಿದೆ. ಇದು ಪ್ರಾಥಮಿಕವಾಗಿ ನೀರಾವರಿ ಮತ್ತು ವಿದ್ಯುತ್ ಉತ್ಪಾದನೆಗೆ ಬಳಸಲಾಗುವ ಬಹುಪಯೋಗಿ ಜಲಾಶಯವಾದ ಕಾರಣ ಈ ಪ್ರದೇಶದಲ್ಲಿ ಕೃಷಿ ಉತ್ಪಾದಕತೆಯನ್ನು ಹೆಚ್ಚಿಸುವ ಮೂಲಕ

ವಿಶಾಲವಾದ ಕೃಷಿ ಪ್ರದೇಶಗಳಿಗೆ ನಿರ್ಣಾಯಕ ನೀರಾವರಿಗೆ ನೀರನ್ನು ಒದಗಿಸಿ ಈ ಪ್ರದೇಶದ ರೈತರ ಜೀವನೋಪಾಯವನ್ನು ಗಮನಾರ್ಹವಾಗಿ ಸುಧಾರಿಸಿತು. ಜಲಾಶಯದ ಸುತ್ತಲಿನ ಕೈಗಾರಿಕೆಗಳು ಮತ್ತು ಮಾನವ ವಸಾಹತುಗಳ ಅಭಿವೃದ್ಧಿಗೆ ಅನುಕೂಲ ಮಾಡಿಕೊಟ್ಟಿತು, ಪ್ರದೇಶದ ಸಾಮಾಜಿಕ–ಆರ್ಥಿಕ ಬೆಳವಣಿಗೆಗೆ ಕೊಡುಗೆ ನೀಡಿದೆ. ಅತಿ ಹೆಚ್ಚು ರೈಸ್ ಮಿಲ್, ಗುಣಮಟ್ಟದ ಅಕ್ಕಿ ಬೆಳೆದು ದೇಶ ವಿದೇಶಕ್ಕೆ ರಫ್ತುಮಾಡುವ ಮೂಲಕ ತನ್ನದೇ ಆದ ವಿಶಿಷ್ಟ ಸ್ಥಾನವನ್ನು ಗಂಗಾವತಿ ಹೊಂದಿದೆ. ಇಲ್ಲಿನ ಕೃಷಿ ವಿಸ್ತರಣಾ ಕೇಂದ್ರ 1956ರಲ್ಲಿಯೇ ಸ್ಥಾಪನೆಯಾಗುವ ಮೂಲಕ ಗಂಗಾವತಿ, ಕಾರಟಗಿ, ಮುನಿರಾಬಾದ್, ಅವಿಭಜಿತ ಬಳ್ಳಾರಿ ಜಿಲ್ಲೆಯ ಹೊಸಪೇಟೆ, ಕಂಪ್ಲಿ, ಕುರುಗೋಡು, ರಾಯಚೂರು ಜಿಲ್ಲೆಯ ಮಸ್ಕಿ, ಸಿಂಧನೂರು ಭಾಗದ ರೈತರಿಗೆ ವಿವಿಧ ರೀತಿಯಲ್ಲಿ ನೆರವಾಗುವ ಮೂಲಕ ಕೃಷಿ ಕ್ಷೇತ್ರದಲ್ಲಿ ತನ್ನದೇ ಆದ ಹೆಗ್ಗಳಿಕೆಯನ್ನು ಹೊಂದಿದೆ. ತುಂಗಭದ್ರಾ ಜಲಾಶಯ ಒಡಲಿನಲ್ಲಿ 16 ಲಕ್ಷಕ್ಕೂ ಹೆಚ್ಚಿನ ಪ್ರದೇಶದಲ್ಲಿ ಭತ್ತ, ಬಾಳೆ, ಕಬ್ಬು ಸೇರಿ ಇತರೆ ಬೆಳೆಗಳನ್ನು ಬೆಳೆಯುತ್ತಾರೆ. ಇದರಿಂದಾಗಿ ಕೃಷಿ ಕಾರ್ಮಿಕರಿಗೆ ದುಡಿಯಲು ಕೆಲಸ ಮತ್ತು ಸಾಗುವಳಿದಾರರಿಗೆ ಕೃಷಿ ಉತ್ಪನ್ನಗಳ ಮಾರಾಟ ದಿಂದ ಆದಾಯ ದೊರೆಯಲು ತುಂಗಭದ್ರಾ ಜಲಾಶಯವು ಮಹತ್ವದ ಪಾತ್ರ ವಹಿಸುತ್ತದೆ. ತುಂಗಭದ್ರಾ ಜಲಾಶಯ ನಿರ್ಮಾಣದಿಂದ ಕರ್ನಾಟಕ ರಾಜ್ಯದ ಬಳ್ಳಾರಿ, ವಿಜಯನಗರ, ಕೊಪ್ಪಳ, ರಾಯಚೂರು ಜಿಲ್ಲೆಗಳು ಮತ್ತು ಆಂಧ್ರಪ್ರದೇಶದ ಕರ್ನೂಲು, ಕಡಪ, ಅನಂತಪುರ ಜಿಲ್ಲೆಗಳು ಮತ್ತು ತೆಲಂಗಾಣ ರಾಜ್ಯದ ಗಜ್ವಾಲ್ (ಜೋಳದಂಬ) ಜಿಲ್ಲೆ. ಈ ಮೂರು ರಾಜ್ಯಗಳ ಎಂಟು ಜಿಲ್ಲೆಗಳ ಜನರಿಗೆ ಕುಡಿಯುವ ನೀರಿನ ಸರಬರಾಜು ವಿದ್ಯುತ್ ಉತ್ಪಾದನೆಗೆ ನೀರು ಸರಬರಾಜು, ಅಕ್ಕಿ ಗಿರಣಿಗಳಿಗೆ, ಎಣ್ಣೆ ಗಿರಣಿಗಳಿಗೆ, ಸಕ್ಕರೆ ಕಾರ್ಖಾನೆಗಳಿಗೆ, ಬೃಹತ್ ಕೈಗಾರಿಕೆಗಳಿಗೆ ವಿದ್ಯುತ್ ಸೌಲಭ್ಯವನ್ನು ಒದಗಿಸಿದೆ. ಪಶುಸಂಗೋಪನೆಗೆ ಮತ್ತು ಮಿನುಸಾಕಾಣಿಕೆಗೆ ನೀರನ್ನು ಪೂರೈಸುತ್ತದೆ. ಸಣ್ಣ ಅಣೆಕಟ್ಟುಗಳಿಗೆ ನೀರಿನ ಸರಬರಾಜು ಹಾಗೂ ಎಂಟು ಜಿಲ್ಲೆಗಳ ಸಾವಿರಾರು ಗ್ರಾಮಗಳ ಮತ್ತು ಪಟ್ಟಣಗಳಿಗೆ ಕೆರೆಗಳನ್ನು ತುಂಬಿಸಲು ಈ ಜಲಾಶಯ ದಿಂದ ನೀರು ಸರಬರಾಜು ಆಗುತ್ತದೆ.

ತುಂಗಭದ್ರ ನದಿಯ **ಎಡದಂಡೆ ಕಾಲುವೆ**ಯು 227 ಕಿ.ಮೀ ಉದ್ದವಾಗಿದೆ. ಇದು 1963ರಲ್ಲಿ ಪೂರ್ಣಗೊಂಡು 1.82 ಲಕ್ಷ ಹೆಕ್ಟೇರ್‌ಳಿಗೆ ನೀರಾವರಿ ಒದಗಿಸಿದೆ. **ಬಲದಂಡೆಯ ಕೆಳ ಮಟ್ಟದ ಕಾಲುವೆ** 349 ಕಿ.ಮೀ ಉದ್ದವಾಗಿದೆ. ಇದನ್ನೂ ಸಹ 1963ರಲ್ಲಿಯೇ ಪೂರ್ಣಗೊಳಿಸಲಾಯಿತು. ಇದು ಕರ್ನಾಟಕ ಹಾಗೂ ಆಂಧ್ರ ಪ್ರದೇಶಗಳಲ್ಲಿ 3.5 ಲಕ್ಷ ಹೆಕ್ಟೇರ್‌ಗಳಿಗೆ ನೀರಾವರಿಯನ್ನು ಒದಗಿಸಿದೆ. **ಬಲದಂಡೆಯ ಮೇಲ್ಮಟ್ಟದ ಕಾಲುವೆ**ಯು 196 ಕಿ.ಮೀ. ಉದ್ದವಾಗಿದೆ. ಇದು 36,000 ಹೆಕ್ಟೇರ್‌ಗಳಿಗೆ ನೀರಾವರಿ ಒದಗಿಸುವುದು.

ಎಡದಂಡೆ ಮುಖ್ಯ ಕಾಲುವೆ (LBMC) 5.80ಲಕ್ಷ ಎಕರೆ, ಎಡದಂಡೆ ಮೇಲ್ಮಟ್ಟದ ಕಾಲುವೆ 0.01 ಎಕರೆ, ಬಲದಂಡೆ ಮೇಲ್ಮಟ್ಟದ ಕಾಲುವೆ 3.88 ಲಕ್ಷ ಎಕರೆ, ಬಲದಂಡೆ ಕೆಳಮಟ್ಟದ ಕಾಲುವೆ 2.50 ಲಕ್ಷ ಎಕರೆ. ಎಡದಂಡೆ ಕಾಲುವೆಯು ರಾಯಚೂರು ಮತ್ತು ಕೊಪ್ಪಳ ಜಿಲ್ಲೆಗಳಲ್ಲಿ ಸಂಪೂರ್ಣವಾಗಿ ಕರ್ನಾಟಕದಲ್ಲಿ ಪ್ರವಹಿಸುತ್ತದೆ. ಬಲದಂಡೆ ಕೆಲಮಟ್ಟ ಮತ್ತು ಮೇಲ್ಮಟ್ಟದ ಕಾಲುವೆಗಳು ಕರ್ನಾಟಕದ ಬಳ್ಳಾರಿ ಜಿಲ್ಲೆ ಹಾಗೂ ಆಂಧ್ರಪ್ರದೇಶದ ಕರ್ನೂಲು ಮತ್ತು ಅನಂತಪುರ ಜಿಲ್ಲೆಗಳಲ್ಲಿ ಹರಿಯುತ್ತದೆ. ನೀರಿನ ಒಪ್ಪಂದದಂತೆ ನೀರು ಬಳಸಿಕೊಳ್ಳಬೇಕಾಗಿರುವುದರಿಂದ ಗ್ರಾಮಗಳ ವ್ಯಾಪ್ತಿಯ ಶೇಕಡ 25ರಷ್ಟು ಮಾತ್ರ ನೀರಾವರಿ ಕಲ್ಪಿಸಲಾಗಿದೆ.

ತುಂಗಭದ್ರಾ ಜಲಾಶಯದ ದಿಂದ ವಿದ್ಯುತ್ ಉತ್ಪಾದನೆಗಾಗಿ ಐದು ವಿದ್ಯುತ್‌ಗಾರಗಳನ್ನು ಸ್ಥಾಪನೆ ಮಾಡಲಾಗಿದೆ. ಅಣೆಕಟ್ಟೆಯ ಬಲಭಾಗದ ಕೆಳಗಡೆ

ಟಿ.ಬಿ.ಡ್ಯಾಮ್ ವಿದ್ಯುತ್‌ಗಾರವನ್ನು, ಅಣೆಕಟ್ಟೆಯ ಬಲಭಾಗದ ಪವರ್ ಕಾಲುವೆಗೆ ಹಂಪಿ ವಿದ್ಯುತ್‌ಗಾರವನ್ನು, ಅಣೆಕಟ್ಟೆಯ ಎಡಭಾಗದ ಕೆಳಗಡೆ ಮುನಿರಾಬಾದ್ ವಿದ್ಯುತ್‌ಗಾರವನ್ನು, ಎಡದಂಡೆಯ ಮುಖ್ಯ ಕಾಲುವೆಯ ಶಿವಪುರದ ಹತ್ತಿರ ಹರಿಯುವ ನೀರಿಗೆ ಬೊರೋಕ ವಿದ್ಯುತ್‌ಗಾರವನ್ನು, ಎಡದಂಡೆಯ ಮುಖ್ಯಕಾಲುವೆಗೆ ಮಲ್ಲಾಪುರದ ಹತ್ತಿರ ವಿದ್ಯುತ್‌ಗಾರವು ಸೇರಿ ಇವುಗಳಿಂದ ಒಟ್ಟು ವಿದ್ಯುತ್ ಉತ್ಪಾದನಾ ಸಾಮರ್ಥ 126 ಮೆಗಾವ್ಯಾಟ್‌ಗಳಾಗಿದೆ.

ಅಂತರರಾಜ್ಯ ನದಿ ನೀರು ಹಂಚಿಕೆ ವಿಚಾರದಲ್ಲಿ ಬಚಾವತ್ ಆಯೋಗದ ತೀರ್ಪಿನಂತೆ ಅತ್ಯಂತ ವೈಜಾನಿಕವಾಗಿ ಹಂಚಿಕೆಯಾಗಿರುವ ನೀರಾವರಿ ಯೋಜನೆ ತುಂಗಭದ್ರಾ ಜಲಾಶಯ ಯೋಜನೆ. ಇಲ್ಲಿ ವಾರ್ಷಿಕವಾಗಿ ಲಭ್ಯವಿರುವ 212 ಟಿಎಂಸಿ ಅಡಿ ನೀರನ್ನು ಪೂರ್ತಿಯಾಗಿ ಬಳಸಿಕೊಂಡಿದ್ದೇ ಇಲ್ಲ. ಒಪ್ಪಂದದಂತೆ ಕರ್ನಾಟಕಕ್ಕೇ ಶೇ 65ರಷ್ಟು ಹಾಗೂ ಆಂಧ್ರಕ್ಕೆ ಶೇ.35ರಷ್ಟು ನೀರಿನ ಪಾಲು ಇದೆ.(ವಿಭಜನೆಗೊಂಡು ತೆಲಂಗಾಣ ನಿರ್ಮಾಣವಾಗಿದ್ದರೂ ನೀರಿನ ಪಾಲು ಅಷ್ಟೇ) ಪ್ರವಾಹದ ನೀರನ್ನು ಬಳಸುವುದರಲ್ಲಿ ಬುದ್ಧಿವಂತಿಕೆ ತೋರಿದರೆ ಮಾತ್ರ ನೀರಿನ ಸಮರ್ಥಬಳಕೆ ಸಾಧ್ಯವಾದಿತು. ತುಂಗಭದ್ರಾ ಜಲಾಶಯ ನಿರ್ಮಾಣವಾಗಿ 70 ವರ್ಷ ಕಳೆದಿದೆ. ಹಿಂದಿನ ವರ್ಷವೂ ಸೇರಿ ಒಟ್ಟು ಒಂಭತ್ತು ವರ್ಷ ಬಿಟ್ಟರೆ 61 ವರ್ಷವೂ ವಾರ್ಷಿಕ ಸರಾಸರಿ 200 ರಿಂದ 300 ಟಿಎಂಸಿ ಯಷ್ಟು ನೀರು ನದಿಗೆ ಹರಿದು ಹೋಗಿದೆ. ಹೀಗೆ ಲಭ್ಯವಾದ ನೀರನ್ನೇ ಸದ್ಬಳಿಕೆ ಮಾಡಿಕೊಂಡಿರುವ ಆಂಧ್ರಪ್ರದೇಶ ಪೋಲಾವರಂ ಯೋಜನೆ ವಿಳಂಬವಾಗುತ್ತದೆ ಎಂಬ ಕಾರಣಕ್ಕೆ ಬದಲಿ ಯೋಜನೆ ರೂಪಿಸಿಕೊಂಡಿದೆ. ಇದೀಗ ಆಂಧ್ರಕ್ಕೆ ಕರ್ನಾಟಕದ ಅಗತ್ಯವೇ ಇಲ್ಲದೆ ನೀರಿನ ಮೂಲ ದೊರಕಿಬಿಟ್ಟಿದೆ.

ತುಂಗಭದ್ರಾ ನದಿಯ ಏತ ನೀರಾವರಿ ಯೋಜನೆಗಳು:

ತುಂಗಭದ್ರಾ ನದಿಯ ಏತ ನೀರಾವರಿ ಯೋಜನೆಗಳು ವ್ಯವಸಾಯಕ್ಕಾಗಿ ಮತ್ತು ಜನ, ಜಾನುವಾರುಗಳಿಗೆ ಕುಡಿಯುವ ನೀರಿಗಾಗಿ ಹಾಗೂ ಕೆರೆಗಳ ತುಂಬಿಸಲು ಅನುಕೂಲವಾಗಿದೆ. ಸಾಸ್ವೇಹಳ್ಳಿ ಏತ ನೀರಾವರಿ ಯೋಜನೆಯು ಚನ್ನಗಿರಿ ತಾಲೂಕಿನ ಕಸಬಾ ಹೋಬಳಿಯ 27 ಕೆರೆಗಳಿಗೆ, ದಾವಣಗೆರೆ ತಾಲೂಕಿನ ಮಾಯಕೊಂಡ ವ್ಯಾಪ್ತಿಯ 11 ಕೆರೆಗಳಿಗೆ, ಹೊನ್ನಾಳಿ ತಾಲೂಕಿನ 4 ಕೆರೆಗಳಿಗೆ ನೀರು ಒದಗಿಸುವುದಾಗಿದೆ. ರಾಣಿಬೆನ್ನೂರು ತಾಲೂಕಿನ ದೊಡ್ಡಕೆರೆ ಮತ್ತು ಸುತ್ತಮುತ್ತಲಿನ 3 ಕೆರೆಗಳನ್ನು ಶೇ.50ರಷ್ಟು ತುಂಬಿಸುವುದು, ಹರಪನಹಳ್ಳಿ ತಾಲೂಕಿನ 50 ಕೆರೆಗಳನ್ನು ತುಂಬಿಸುವುದು, ಗುಡ್ಡದ ಮಾದಾಪುರ ಕೆರೆಗಳ ತುಂಬಿಸುವ ಯೋಜನೆಯು ಹಾವೇರಿ ಜಿಲ್ಲೆಯ ಹಿರೆಕೇರೂರು ತಾಲೂಕಿನ 13 ಕೆರೆ ತುಂಬಿಸುವುದಾಗಿದೆ. ಉಡುಗಣೆ–ತಾಳಗುಂದ–ಹೊಸೂರು ಹೋಬಳಿಗಳಿಗೆ ಕೆರೆ ತುಂಬಿಸುವ ಯೋಜನೆಯು ಜಿಲ್ಲಾ ಪಂಚಾಯಿತಿಯ ಕುಡಿಯುವ ನೀರಿಗಾಗಿ 182 ಕೆರೆಗಳಿಗೆ ಶೇ.50ರಷ್ಟು ನೀರು ತುಂಬಿಸುವುದಾಗಿದೆ. ಹಾಗೆಯೇ ಜಗಳೂರು ತಾಲೂಕಿನ 53 ಕೆರೆಗಳಿಗೆ ನೀರು ತುಂಬಿಸುವುದಾಗಿದೆ. ಭರಮಸಾಗರ ಹೋಬಳಿಯ 38 ಕೆರೆಗಳು ಮತ್ತು ದಾವಣಗೆರೆ 1 ಕೆರೆ ತುಂಬಿಸುವ ಯೋಜನೆ, ಬುಡ್ಡಪ್ಪನಹಳ್ಳಿ ಕೆರೆ ಮತ್ತು ಆಣೂರು ಕೆರೆ ತುಂಬಿಸುವ ಯೋಜನೆಯು ಹಾವೇರಿ ಜಿಲ್ಲೆಯ ಬ್ಯಾಡಗಿ ತಾಲೂಕಿನ 30 ಕೆರೆ ಮತ್ತು ಬುಡ್ಡಪ್ಪನಹಳ್ಳಿ ಹಾಗೂ ಸುತ್ತಮುತ್ತಲಿನ 17 ಕೆರೆಗಳನ್ನು ತುಂಬಿಸುವುದಾಗಿದೆ. ಸರ್ವಜ್ಞ ಕೆರೆ ತುಂಬಿಸುವ ಯೋಜನೆಯು ಸಹ ಹಾವೇರಿ ಜಿಲ್ಲೆಯ ಹಿರೇಕೇರೂರು ಮತ್ತು ರಟ್ಟಿಹಳ್ಳಿ ವ್ಯಾಪ್ತಿಯಲ್ಲಿರುವ 77 ಕೆರೆಗಳಿಗೆ ನೀರು ತುಂಬಿಸುವುದಾಗಿದೆ. ಬೆನಕನ ಕೆರೆ ಮತ್ತು ಗೋವಿನಕೋವಿ ಕೆರೆ ತುಂಬಿಸುವ ಯೋಜನೆಯು ದಾವಣಗೆರೆ ಜಿಲ್ಲೆಯ ಹೊನ್ನಾಳಿ

ತಾಲ್ಲೂಕಿನ 113 ಕೆರೆಗಳಿಗೆ ನೀರು ತುಂಬಿಸುವುದಾಗಿದೆ. ಹೊಳೆ ಆನ್ವೇರಿ–ಮೆಡ್ಲೇರಿ ಕೆರೆ ತುಂಬಿಸುವ ಯೋಜನೆಯು ರಾಣಿಬೆನ್ನೂರು ತಾಲೂಕಿನ 18 ಕೆರೆಗಳು ಮತ್ತು 5 ಬ್ಯಾರೇಜ್‌ಗಳನ್ನು, ಮೆಡ್ಲೇರಿ ಮತ್ತು ರಾಹುತನಕಟ್ಟೆ ಕೆರೆಗಳನ್ನು ತುಂಬಿಸುವುದಾಗಿದೆ. ಹಾವೇರಿ ಜಿಲ್ಲೆಯ ರಟ್ಟಿಹಳ್ಳಿ ತಾಲೂಕಿನ ಬಳ್ಳಾಪುರ, ಹಾಡ್ಡೆ 7 ಕೆರೆಗಳು ತುಂಬಿಸುವುದು ಗದಗ ಜಿಲ್ಲೆಯ ಶಿರಹಟ್ಟಿ ತಾಲೂಕಿನ 20 ಇಂಗು ಕೆರೆಗಳಿಗೆ ನೀರು ತುಂಬಿಸುವುದು ವಿಜಯನಗರ ಜಿಲ್ಲೆಯ ಮಾಲವಿ ಜಲಾಶಯಕ್ಕೆ ನೀರು ತುಂಬಿಸುವ ಯೋಜನೆಯು ತುಂಗಭದ್ರಾ ಜಲಾಶಯದ ಹಿನ್ನೀರು ಹಗರಿಬೊಮ್ಮನಹಳ್ಳಿ ತಾಲೂಕಿನ ರೈತರ ಜೀವನಾಡಿಯಾಗಿರುವ ಮಾಲವಿ ಗ್ರಾಮದ ಹತ್ತಿರ ಹರಿಯುವ ಚಿಕ್ಕಹಗರಿ ನದಿಗೆ 1972ರಲ್ಲಿ ಜಲಾಶಯ ನಿರ್ಮಾಣ ಮಾಡಲಾಗಿದೆ. ಈ ಜಲಾಶಯವು 2 ಟಿಎಂಸಿ ನೀರು ಸಂಗ್ರಹಿಸುವ ಸಾಮರ್ಥ್ಯವನ್ನು ಹೊಂದಿದೆ. ಈ ಜಲಾಶಯ ಭರ್ತಿಯಾದರೆ ಮುಂಗಾರು ಮತ್ತು ಹಿಂಗಾರಿಗೆ ತಾಲೂಕಿನ ಹತ್ತಾರು ಗ್ರಾಮಗಳ ರೈತರ ಜಮೀನುಗಳಿಗೆ ಅಂದರೆ 2,965 ಹೆಕ್ಟೇರ್ ನೀರಾವರಿ ಕೃಷಿಗೆ ಅನುಕೂಲವಾಗುತ್ತದೆ. ಈ ಜಲಾಶಯಕ್ಕೆ ನೀರು ಹರಿದು ಬರುವ ಮೇಲ್ಭಾಗದಲ್ಲಿ ಸಣ್ಣ, ಸಣ್ಣ ಅಣೆಕಟ್ಟುಗಳು ನಿರ್ಮಾಣ ಮಾಡಿರುವುದರಿಂದ ಈ ಮಾಲವಿ ಜಲಾಶಯಕ್ಕೆ ನೀರಿನ ತೊಂದರೆಯಾಗುತ್ತಿದೆ. ತುಂಗಭದ್ರಾ ಜಲಾಶಯದ ಹಿನ್ನೀರಿನ ಏತ ನೀರಾವರಿಯಿಂದ ಜಲಾಶಯಕ್ಕೆ ಕೊಳವೆ ಮಾರ್ಗದ ಮೂಲಕ ನೀರು ತುಂಬಿಸುವುದಾಗಿದೆ. ತಿಮ್ಮಾಪುರ ಏತನೀರಾವರಿ ಯೋಜನೆಯು ತುಂಗಭದ್ರಾ ಜಲಾಶಯದ ಕೆಳಭಾಗದಲ್ಲಿ ಹರಿಯುವ ತುಂಗಭದ್ರಾ ನದಿಗೆ ರಾಯಚೂರು ಜಿಲ್ಲೆ ಸಿಂಧನೂರು ತಾಲೂಕಿನ ತುರಕಟ್ಟಿ ಗ್ರಾಮದ ಹತ್ತಿರ ನದಿಯಿಂದ ನೀರನ್ನು ಎತ್ತಿ ತುಂಗಭದ್ರಾ ಎಡದಂಡೆ ಮುಖ್ಯಕಾಲುವೆಯ 54ನೇ ವಿತರಣಾ ಕಾಲುವೆಗೆ ನೀರು ಬಿಡಸಲಾಗಿದೆ. ಈ ಕಾಲುವೆಯ ಹಿನ್ನೀರಿನ ರೈತರಿಗೆ ಮುಖ್ಯ ಕಾಲುವೆಯಿಂದ ನೀರು ಸಿಗದ ಕಾರಣ ಈ ಯೋಜನೆಯನ್ನು ಕೈಗೆತ್ತಿಕೊಳ್ಳಲಾಗಿದೆ. ಕರಡೋಣ ಮತ್ತು ರಾಮದುರ್ಗ ಕೆರೆಗಳನ್ನು ತುಂಬಿಸುವ ಯೋಜನೆಯು ತುಂಗಭದ್ರಾ ಜಲಾಶಯದ ಕೆಳಭಾಗದ ಗಂಗಾವತಿ–ಕಂಪ್ಲಿ ಸೇತುವೆ ಹತ್ತಿರ ಈಗಾಗಲೇ ಸಣ್ಣ ನೀರಾವರಿ ಇಲಾಖೆಯಿಂದ ಪೂರ್ಣಗೊಳಿಸಲಾಗಿರುವ ದೇವಲಾಪುರ ಮತ್ತು ಇತರೆ ಕೆರೆಗಳಿಗೆ ನೀರು ತುಂಬಿಸುವ ಯೋಜನೆಯಿಂದ ಕರಡೋಣ, ಸಿರವಾರ, ರಾಮದುರ್ಗ ಮತ್ತು ಹನಕೆರೆ 4 ಕೆರೆಗಳಿಗೆ ನೀರು ತುಂಬಿಸುವ ಯೋಜನೆಯಾಗಿದೆ. ಬಹದ್ದೂರು ಬಂಡಿ ಏತನೀರಾವರಿ ಯೋಜನೆಯು ಕೊಪ್ಪಳ ವ್ಯಾಪ್ತಿಯಲ್ಲಿ ಬರುವ ಬಹದ್ದೂರು ಬಂಡಿ ಮತ್ತು ಇತರ 18 ಗ್ರಾಮಗಳ ವ್ಯಾಪ್ತಿಯ 5256 ಹೆಕ್ಟೇರ್ ಪ್ರದೇಶಕ್ಕೆ ನೀರು ಒದಗಿಸುವುದಾಗಿದೆ. ಕೂಡ್ಲಿಗಿ ತಾಲೂಕಿನ 74 ಕೆರೆಗಳ ತುಂಬಿಸುವ ಯೋಜನೆ. ಆಲದಮ್ಮನ ಕೆರೆ ತುಂಬಿಸುವ ಯೋಜನೆಯು ಗದಗ ಜಿಲ್ಲೆ ಶಿರಟ್ಟಿ ತಾಲೂಕಿನ ಸುಗ್ನಳ್ಳಿ, ಬನ್ನಿಕೊಪ್ಪ ಕೆರೆಗಳನ್ನು ತುಂಬಿಸುವುದಾಗಿದೆ. ಮುಕ್ಕುಂಪಿ ಕೆರೆ ತುಂಬಿಸುವ ಯೋಜನೆಯು ತುಂಗಭದ್ರಾ ಜಾಲಶಯ ದಿಂದ ಕೆಳಗಡೆ ಹರಿಯುವ ತುಂಗಭದ್ರಾ ನದಿಯಿಂದ 0.105 ಟಿಎಂಸಿ ನೀರನ್ನು ಮೇಲಕ್ಕೆ ಎತ್ತಿ ಕೊಪ್ಪಳ ಜಿಲ್ಲೆಯ ಗಂಗಾವತಿ ತಾಲೂಕಿನ ಮುಕ್ಕುಂಪಿ ಕೆರೆ ಹಾಗೂ ಇತರೆ 5 ಕೆರೆಗಳ ತುಂಬಿಸುವ ಯೋಜನೆಯಾಗಿದೆ. ಹೊಸಪೇಟೆ ತಾಲ್ಲೂಕಿನ ಪಾಪಿನಾಯಕನಹಳ್ಳಿಯ ಏತ ನೀರಾವರಿ ಯೋಜನೆಯಡಿ 22 ಕೆರೆಗಳಿಗೆ ನೀರು ತುಂಬಿಸುವ ಯೋಜನೆಯ ಮೂಲಕ 13 ಹಳ್ಳಿಗಳ ಕೃಷಿ ಕಾರ್ಯಗಳಿಗೆ ಹಾಗೂ ಅಂತರ್ಜಲ ವೃದ್ಧಿಗೆ ಈ ಕೆರೆ ತುಂಬಿಸುವಿಕೆಯಿಂದ ಪ್ರಯೋಜನವಾಗಲಿದೆ. ಈ ಯೋಜನೆಯಡಿಯಲ್ಲಿ 0.30ಟಿಎಂಸಿ ಅಡಿ ನೀರನ್ನು ಕೆರೆಗಳಿಗೆ ಪಂಪ್ ಮಾಡಲಾಗುತ್ತದೆ. ತುಂಗಭದ್ರಾ ನದಿಗೆ ಸಂಬಂಧಿಸಿದ ಈ ಮೇಲ್ಕಂಡ ಏತ ನೀರಾವರಿ

ಯೋಜನೆಗಳಲ್ಲಿ ಕೆಲವೊಂದು ಕಾಮಗಾರಿಗಳು ಮುಕ್ತಾಯಗೊಂಡಿವೆ ಇನ್ನೂ ಕೆಲವು ಕಾಮಗಾರಿಗಳು ಸರ್ಕಾರದ ಅನುಮೋದನೆಯೊಂದಿಗೆ ಪ್ರಗತಿಯಲ್ಲಿವೆ. ಈ ಏತ ನೀರಾವರಿ ಯೋಜನೆಗಳು ಲಕ್ಷಾಂತರ ರೈತರ ಸ್ವಂತ ಪಂಪ್‌ಸೆಟ್‌ಗಳ ನೀರಾವರಿಗಳೊಂದಿಗೆ ರೈತರ ವ್ಯವಸಾಯಕ್ಕಾಗಿ ಮತ್ತು ಜನ, ಜಾನುವಾರುಗಳಿಗೆ ಕುಡಿಯುವ ನೀರಿಗಾಗಿ, ಕೆರೆಗಳಿಗೆ ನೀರು ತುಂಬಿಸಲು ಈ ತುಂಗಭದ್ರಾ ನದಿ ಆಸರೆಯಾಗಿದೆ.

ತುಂಗಭದ್ರಾ ಜಲಾಶಯವು ಪ್ರಸ್ತುತ ಒಟ್ಟು 105.78 ಟಿಎಂಸಿ ಅಡಿ ನೀರು ಸಂಗ್ರಹಣಾ ಸಾಮರ್ಥ್ಯ ಹೊಂದಿದ್ದು, ತುಂಬಿದ ಬಳಿಕ ಪ್ರತಿಬಾರಿಯೂ ವ್ಯರ್ಥವಾಗಿ ನದಿಗೆ ನೀರು ಹರಿದು ಹೋಗುವ ಪ್ರಮಾಣ ಹೆಚ್ಚಾಗುತ್ತಿದೆ. ಉದಾಹರಣೆಗೆ 2022ರಲ್ಲಿ ಜಲಾಶಯದಲ್ಲಿ ಸಂಗ್ರಹವಾದ ಮತ್ತು ನದಿಗೆ ಹರಿದು ಹೋದ ನೀರಿನ ಪ್ರಮಾಣ 604.64 ಟಿ.ಎಂ.ಸಿ.ಯಾಗಿದೆ. ಕರ್ನಾಟಕ ಆಂಧ್ರಪ್ರದೇಶ ಮತ್ತು ತೆಲಂಗಾಣ ರಾಜ್ಯಗಳು ತುಂಗಭದ್ರಾ ನೀರಿನಲ್ಲಿ ಪಾಲು ಹೊಂದಿರುವುದರಿಂದ ರಾಜ್ಯಸರ್ಕಾರವು ಉಳಿದ ಇನ್ನೆರಡು ರಾಜ್ಯಗಳ ಜೊತೆ ಸಮನ್ವಯ ಸಾಧಿಸಿ ಯೋಜನೆ ಆರಂಭಿಸಬೇಕಾಗಿದೆ. ಪ್ರತಿ ಬಾರಿ ನೀರು ವ್ಯರ್ಥವಾಗಿ ಹರಿಯುವಾಗಲೆಲ್ಲ ಸಮಾನಾಂತರ ಜಲಾಶಯದ ಚರ್ಚೆ ಮುನ್ನಲೆಗೆ ಬರುತ್ತದೆ. ದಶಕದ ಹಿಂದೆಯೆ ಈ ಯೋಜನೆ ಆರಂಭವಾಗಿದ್ದರೆ ಈ ಭಾಗದಲ್ಲಿ ಮಳೆ ಕೊರತೆಯಾದಗ ಕೃಷಿ ಚಟುವಟಿಕೆಗೆ ನೀರಿನ ತೊಂದರೆ ತಪ್ಪುತ್ತಿತ್ತು.

ಅಣೆಕಟ್ಟು ಎದುರಿಸುತ್ತಿರುವ ಅಪಾಯಗಳು

ತುಂಗಭದ್ರಾ ಜಲಾಶಯದ ಜಲಾನಯನ ಪ್ರದೇಶದಲ್ಲಿನ ಕೃಷಿಚಟುವಟಿಕೆ, ಅರಣ್ಯ ನಾಶ, ಅವೈಜ್ಞಾನಿಕ ಕೃಷಿ ಚಟುವಟಿಕೆ, ಅಪಾರ ರಸಗೊಬ್ಬರಗಳ ಬಳಕೆ, ದ್ರವ ಹಾಗೂ ಘನತ್ಯಾಜ್ಯವನ್ನು ನದಿಗೆ ಹರಿಸುವುದು, ಕೈಗಾರಿಕಾ ತ್ಯಾಜ್ಯಗಳ ವಿಲೇವಾರಿ ಮುಂತಾದ ಕಾರಣಗಳಿಂದ ಜಲಾಶಯದಲ್ಲಿ ಹೂಳು ಹೆಚ್ಚುತ್ತಿದೆ. ಜಲಾಶಯದಲ್ಲಿ ವರ್ಷಕ್ಕೆ 0.45 ಟಿಎಂಸಿ ಅಡಿಯಷ್ಟು ಹೂಳು ತುಂಬುತ್ತದೆ. ಹೀಗಾಗಿ ಸದ್ಯ ಜಲಾಶಯದಲ್ಲಿ 28 ಟಿಎಂಸಿ ಅಡಿಯಷ್ಟು ಹೂಳು ತುಂಬಿದ್ದು, ನೀರು ಸಂಗ್ರಹ ಸಾಮರ್ಥ್ಯ 133. ಟಿಎಂಸಿ ಅಡಿಯಿಂದ 105 ಟಿಎಂಸಿ ಅಡಿಗೆ ಕುಸಿದಿದೆ. 1 ಟಿಎಂಸಿ ಅಡಿ ಹೂಳು ಅಂದರೆ 50 ಲಕ್ಷ ಲಾರಿ ಲೋಡ್‌ಗಳಷ್ಟಾಗುತ್ತದೆ. ಒಂದು ಲೋಡ್ ಹೂಳನ್ನು ಸಾಗಿಸಲು ಕನಿಷ್ಠ 1 ಸಾವಿರ ಖರ್ಚಿನ ಲೆಕ್ಕವಿಟ್ಟು ಕೊಂಡರೂ 500 ಕೋಟಿ ಹಾಗೂ 28 ಟಿಎಂಸಿ ಅಡಿ ಹೊಳೆತ್ತಲು 14000 ಕೋಟಿ ಹಣ ಬೇಕಾಗುತ್ತದೆ. ಅನೇಕ ರಾಜಕಾರಣಿ–ಗುತ್ತಿಗೆದಾರರು ಹೂಳು ತೆಗೆಯುವ ನೂರಾರು ಕೋಟಿಯ ಯೋಜನೆಗಾಗಿ ಪ್ರಸ್ತಾವನೆ ಸಲ್ಲಿಸುತ್ತಿದ್ದಾರೆ. ಅದರ ಬದಲಾಗಿ ಹೂಳು ತುಂಬಲು ಕಾರಣವಾಗುತ್ತಿರುವ ಚಟುವಟಿಕೆಗಳನ್ನು ಪ್ರತಿಬಂಧಿಸುವುದು ಪ್ರಸ್ತುತ. ಜಲಾಶಯದ ಹಿನ್ನೀರು ಪ್ರದೇಶದಲ್ಲಿ ಕೆಲವು ರೈತರು ಉದ್ದು, ಅಲಸಂದಿ, ಕಡ್ಲೆ ಮುಂತಾದ ಬೆಳೆಯನ್ನು ಬೆಳೆಯುತ್ತಿದ್ದರು. ಆದರೆ ಇತ್ತೀಚಿಗೆ ಹಿನ್ನೀರಿನ ಅನೇಕ ಭಾಗದಲ್ಲಿ ಕಿಲೋಮೀಟರ್‌ಗಟ್ಟಲೆ ವಿದ್ಯುತ್ ಕಂಬಗಳನ್ನು ಹಾಕಿ, ಬೋರ್‌ವೆಲ್ ಕೊರೆದು ಸಾವಿರಾರು ಎಕರೆ ಪ್ರದೇಶದಲ್ಲಿ ಶೇಂಗಾ, ಮೆಕ್ಕೆಜೋಳ ಮುಂತಾದ ಬೆಳೆಯನ್ನು ಬೆಳೆಯುತ್ತಿದ್ದಾರೆ. ಒಂದು ದೃಷ್ಟಿಯಿಂದ ಇದು ನಿರಪಾಯಕಾರಿ ಹಾಗೂ ರೈತರಿಗೆ ಲಾಭ ತಂದುಕೊಡುವ ಮಾರ್ಗ ಎಂದು ಅನಿಸುತ್ತದೆ. ಆದರೆ ಇದು ಹೂಳು ತುಂಬಲು ಕಾರಣವಾಗುತ್ತಿದೆ ಎನ್ನುವುದನ್ನು ಬಹುತೇಕ ಜನ ಯೋಚಿಸುವುದಿಲ್ಲ. ಲಕ್ಷಾಂತರ ಹಕ್ಕಿಗಳು ಮೊಟ್ಟೆ ಇಟ್ಟು ಮರಿಮಾಡುವ ಸ್ಥಳದಲ್ಲಿ ಏಕಾಏಕಿ ಕೃಷಿ ಚಟುವಟಿಕೆ ಹೆಚ್ಚಾಗುತ್ತಿದೆ. ಇದರಿಂದ ಅಪರೂಪದ ಹಕ್ಕಿಗಳ ಸಂತಾನೋತ್ಪತ್ತಿಗೆ ಕುತ್ತು ಬಂದಿದೆ.

ತುಂಗಭದ್ರಾ ಜಲಾಶಯವು ನಿರ್ಮಾಣವಾಗಿ 71 ವರ್ಷಗಳಾಗಿವೆ. ಜಲಾಶಯದ ನೀರಿನ ಸಾಮರ್ಥ್ಯ 133 ಟಿ.ಎಂ.ಸಿ.ಯಾಗಿದೆ. ಸುಮಾರು 40

ವರ್ಷಗಳವರೆಗೂ ಜಲಾಶಯದಿಂದ ಎಲ್ಲಾ ಕಾಲುವೆಗಳ ಹಿನ್ನೀರಿನ ರೈತರಿಗೆ ನೀರು ತಲುಪಿ ಎಲ್ಲ ರೈತರು ಬೆಳೆಗಳನ್ನು ಬೆಳೆಯುತ್ತಿದ್ದರು. ಆದರೆ ಜಲಾಶಯದಲ್ಲಿ ಪ್ರತಿವರ್ಷ 0.50 ಟಿ.ಎಂ.ಸಿ. ಹೂಳು ತುಂಬುತ್ತಿರುವುದು ಈ ಜಲಾಶಯದಲ್ಲಿ ಪ್ರಸ್ತುತ 33 ಟಿ.ಎಂ.ಸಿ. ಹೂಳು ಶೇಖರಣೆಯಾಗಿರುವುದರಿಂದ ಸುಮಾರು 35 ವರ್ಷಗಳಿಂದಲೂ ಜಲಾಶಯದ ಹಿನ್ನೀರಿನ ರೈತರ ಭೂಮಿಗಳಿಗೆ ಈಗ ನೀರು ತಲುಪದೇ ರೈತರು ಆತಂಕಕ್ಕೆ ಒಳಗಾಗಿದ್ದಾರೆ.

ತುಂಗಭದ್ರಾ ಜಲಾಶಯದಲ್ಲಿ 28 ಟಿಎಂಸಿ ಅಡಿಗಿಂತಲೂ ಹೆಚ್ಚು ಹೂಳು ತುಂಬಿಕೊಂಡಿರುವ ಕಾರಣ ಹಾಗೂ ಜಲಾಶಯದ ತುಂಬಿದ ನಂತರ ನೀರು ವ್ಯರ್ಥವಾಗಿ ಹರಿದು ಹೋಗದಂತೆ ತಡೆಯಲು ಕೊಪ್ಪಳ ಜಿಲ್ಲೆಯ ಕನಕಗಿರಿ ತಾಲೂಕಿನ ನವಲಿ ಬಳಿ ಹೊಸ ಜಲಾಶಯ ನಿರ್ಮಾಣದ ಆಶಯ ದಶಕದ ಹಿಂದಿನ ಆಗಿನ ರಾಜ್ಯ ಕಾಂಗ್ರೆಸ್ ಸರ್ಕಾರ ಹೇಳಿತ್ತು ಮತ್ತು ಅನುದಾನ ನೀಡುವುದಾಗಿಯೂ ಘೋಷಿಸಿತ್ತು. 2022 ರಲ್ಲಿ ಈ ಯೋಜನೆಗಾಗಿ 13,040 ಕೋಟಿ ವೆಚ್ಚದ ಸಮಗ್ರ ಯೋಜನಾ ವರದಿ (ಡಿಪಿಆರ್) ಸಿದ್ಧಪಡಿಸಲಾಗಿತ್ತು. ಆದರೆ ಈ ಯೋಜನೆಯು ಎರಡೂ ಪಕ್ಷಗಳ ಸರ್ಕಾರಗಳಿಂದ ಕಾರ್ಯರೂಪಕ್ಕೆ ಬಂದಿಲ್ಲ. ಮಲೆನಾಡಿನ ಶಿವಮೊಗ್ಗದಿಂದ ಜಲಾಶಯದವರಿಗೂ ಹರಿದು ಬರುವ ತುಂಗಭದ್ರ ನದಿಯ ಬಲ ಮತ್ತು ಎಡ ಭಾಗಗಳಲ್ಲಿ ನಿರ್ಮಾಣಗೊಂಡಿರುವ ಕಾರ್ಖಾನೆಗಳು ಮತ್ತು ಗಣಿಗಾರಿಕೆಗಳಿಂದ ತುಂಗಭದ್ರಾ ಜಲಾಶಯಕ್ಕೆ ಶೇಖರಣೆಯಾಗುತ್ತಿರುವ ರಾಸಾಯನಿಕ ತ್ಯಾಜ್ಯ, ನೀರಿನಲ್ಲಿ ಸೇರುವುದರಿಂದ ಕುಡಿಯಲು ಈ ನದಿಯ ನೀರನ್ನು ಮೆಚ್ಚಿಕೊಂಡವರು ಆತಂಕಕ್ಕೆ ಒಳಗಾಗಿದ್ದಾರೆ. ತುಂಗಭದ್ರಾ ನದಿ ಬಲಭಾಗ ಮತ್ತು ಎಡಭಾಗಗಳಲ್ಲಿ ಇರುವ ಪಟ್ಟಣಗಳ ಮತ್ತು ಗ್ರಾಮಗಳಿಂದ ತುಂಗಭದ್ರ ನದಿಗೆ ಮತ್ತು ಜಲಾಶಯದ ಹಿನ್ನೆಲೆ ಬಿಡುವ ಚರಂಡಿಗೆ ನೀರು ಮತ್ತು ಅದರಿಂದ ಪರಿಣಾಮಗಳನ್ನು ಕುರಿತು ಪರಾಮರ್ಶಿಸಬೇಕಾಗಿದೆ.

ಇಲ್ಲಿನ ರೈತರು ಪ್ರಮುಖ ಬೆಳೆಯಾದ ಭತ್ತವನ್ನು ಕೃಷಿ ಭೂಮಿ(ಗದ್ದೆ)ಯಲ್ಲಿ ಹೆಚ್ಚು ನೀರು ನಿಲ್ಲಿಸಿ ಬೆಳೆಯುವುದರಿಂದ ಭೂಮಿಯು ಫಲವತ್ತತೆ ಕಳೆದುಕೊಂಡು ಭೂಮಿಯು ಸವಳಾಗುತ್ತಿದೆ. ಈ ಸವಳು ಮಣ್ಣಿನಿಂದ ಭತ್ತದ ಇಳುವರಿ ಕುಸಿದಿರುವುದನ್ನು ನಾವು ಭತ್ತ ಕೃಷಿಯಲ್ಲಿ ಕಾಣುತ್ತೇವೆ ಒಂದು ಕಾಲದಲ್ಲಿ ಜಲಾಶಯದ ನೀರಾವರಿಯ ಮೂಲಕ ಈ ಜಮೀನಿನಲ್ಲಿ ಭತ್ತದ ಇಳುವರಿ ಚೆನ್ನಾಗಿತ್ತು. ನಿರಂತರವಾಗಿ ನೀರು ಭತ್ತ ಬೆಳೆದಿದ್ದರಿಂದ, ಮಣ್ಣು ಸವಳಾಗಿದೆ. ಪ್ರಾರಂಭದಲ್ಲಿ ಮಸಾರಿ (ಕೆಂಪು ಮಣ್ಣು) ಯಿಂದ ಕೂಡಿದ 2 ಎಕರೆ ಭೂಮಿಯಲ್ಲಿ 40 ಕ್ವಿಂಟಲ್ ಭತ್ತ ಇಳುವರಿ ಬರುತ್ತಿತ್ತು. ನಿರಂತರ ಏಕ ಬೆಳೆ(ಭತ್ತ) ಬೆಳೆದ ಕಾರಣ ಈ ಮಸಾರಿ ಭೂಮಿಯೆಲ್ಲಾ ಸವಳಾದ ಕಾರಣ ಈಗ ಇದೇ 2 ಎಕರೆಯಲ್ಲಿ ಭತ್ತದ ಬೆಳೆಯು 20 ಕ್ವಿಂಟಲ್ ಗಿಂತಲೂ ಕಡಿಮೆ ಉತ್ಪನ್ನವಾಗಿದೆ. ಲಾಭದ ಆಸೆಗಾಗಿ ಸತತವಾಗಿ ನೀರು ನಿಲ್ಲಿಸಿ, ವಿವೇಚನೆ ಇಲ್ಲದೇ ರಸಗೊಬ್ಬರ, ಕೀಟನಾಶಕ ಬಳಸಿ ವರ್ಷಕ್ಕೆ ಎರಡು ಬಾರಿ ಭತ್ತ ಬೆಳೆಯುತ್ತಿರುವ ಕೃಷಿ ಭೂಮಿಗಳು ಇಂಥ ಅಧೋಗತಿ ತಲುಪಿವೆ ನಿರಂತರವಾಗಿ ನೀರು ನಿಲ್ಲಿಸಿ ಭತ್ತ ಬೆಳೆದಿದ್ದರಿಂದ, ಮಣ್ಣು ಸವಳಾಗಿದೆ. ಈಗ ಇಲ್ಲಿ ಏನೂ ಬೆಳೆಯದಾಗಿದೆ. ರೈತರು ಹಾಗೂ ಗ್ರಾಮ ಪಂಚಾಯ್ತಿಯ ಸಹಭಾಗಿತ್ವದಲ್ಲಿ ನರೇಗಾ ಯೋಜನೆಯಡಿ ಬಸಿಗಾಲುವೆ ನಿರ್ಮಾಣದಂತಹ ಚಟುವಟಿಕೆಗಳನ್ನು ಕೈಗೊಳ್ಳಬಹುದು. ಇದರಿಂದ ಮುಂದಿನ ದಿನಗಳಲ್ಲಾಗುವ ಅನಾಹುತ ತಪ್ಪಿಸಬಹುದು. ಕೃಷಿಭೂಮಿಯಲ್ಲಿ ನೀರು ನಿಲ್ಲಿಸಿ ಬೆಳೆ ಬೆಳೆಯುವುದರಿಂದ ಸವಳು ಭೂಮಿಯಾಗಿ ಪರಿವರ್ತನೆಯಾಗುತ್ತದೆ. ಈ ಸವಳು ಮಣ್ಣಿಗೆ ಸಕಾಲದಲ್ಲಿ ಫಲವತ್ತತೆಯನ್ನು ಕಾಪಾಡುವಂತಹ ಮತ್ತು ಹೆಚ್ಚಿಸುವಂತ ಚಿಕಿತ್ಸೆ ದೊರೆಯದಿದ್ದರೆ ಮಣ್ಣಿನಲ್ಲಿರುವ ಫಲವತ್ತತೆಯ ಸಾರ ಕಳೆದುಕೊಳ್ಳುತ್ತದೆ.

ತುಂಗಭದ್ರಾ ಜಲಾಶಯದ ಭತ್ತದ ಕಣಜವಾಗಿರುವ ನೀರಾವರಿ ಪ್ರದೇಶವು ಭವಿಷ್ಯತ್ತಿನಲ್ಲಿ 'ಮರುಭೂಮಿ'ಯಾಗುತ್ತದೆ ಎಂದು ಎಚ್ಚರಿಸುತ್ತಾರೆ. ಭೂಮಿ ಸವಳಾಗಲು ಮುಖ್ಯ ಕಾರಣಗಳೇನು ಎನ್ನುವ ಬಗ್ಗೆ ಸುಧಾರಣೆಯ ತಂತ್ರಜ್ಞಾನ ಬಳಸಿ ಆಧ್ಯಯನವನ್ನು ತುರ್ತಾಗಿ ನಡೆಸಬೇಕಾಗಿದೆ.

ಪರಾಮರ್ಶನ ಗ್ರಂಥಗಳು

- ಗಾಣಧಾಳು ಶ್ರೀಕಂಠ. (2022, ಏಪ್ರಿಲ್ 23). *ಬರಡಾಗುತ್ತ ಭತ್ತದ ನೆಲ–ಕೃಷಿ ಭೂಮಿಯಲ್ಲಿ ಜವಳು ಸಮಸ್ಯೆ.* ಪ್ರಜಾವಾಣಿ ಪತ್ರಿಕೆ
- ಗುರುರಾಜ್, ಎಸ್. ದಾವಣಗೆರೆ. (2023). *ಹಸಿರು ಮಂಥನ, ಭೂಮಿ ಕ್ಷೇಮಕ್ಕಾಗಿ ನಾವು–ನೀವು.* ವಶಿಷ್ಠ ಬುಕ್ಸ್.
- ಜವಳಿ ಎಸ್.ಸಿ. (1976). *ತುಂಗಭದ್ರ ಪ್ರೊಜೆಕ್ಟ್ ರಿಪೋರ್ಟ್.* ತುಂಗಭದ್ರಾ ಮಂಡಳಿ.
- ಕರ್ನಾಟಕ ಸರ್ಕಾರ. (2022). *ಸಮಾಜ ವಿಜ್ಞಾನ ಪಠ್ಯಪುಸ್ತಕ (ಪರಿಷ್ಕೃತ).* ಹತ್ತನೆಯ ತರಗತಿ ಭಾಗ–1.
- ಕರ್ನಾಟಕ ಸರ್ಕಾರ (2022). *ಜಲಸಂಪನ್ಮೂಲ ಇಲಾಖೆ ವಾರ್ಷಿಕ ವರದಿ 2022–2023 (ಭಾರಿ ಮತ್ತು ಮಧ್ಯಮ ನೀರಾವರಿ ಮತ್ತು ಕಾಡಾ).* ವಿಕಾಸಸೌಧ,
- ರಂಗನಾಥ. *ಭಾರತದ ಪ್ರಾದೇಶಿಕ ಮತ್ತು ಆರ್ಥಿಕ ಭೋಗೋಳಶಾಸ್ತ್ರ.* ವಿದ್ಯಾನಿಧಿ ಪ್ರಕಾಶನ,
- ವೆಂಕಟೇಶ್ ಎಂ.ಆರ್. (2021). *ತುಂಗಾಭದ್ರೆಯ ಪ್ರಲಾಪ.* ಶ್ರೀಗೌರಿ ಪ್ರಕಾಶನ
- ಶ್ರೀಕಾಂತ್ ಎನ್.ಪಿ. *ಆಪತ್ಕಾಲಕ್ಕೆ ಅಂತರ್ಜಲ.* ನವಕರ್ನಾಟಕ ಪಬ್ಲಿಕೇಷನ್ಸ್.